**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂಃ182/2016**

ಸಿ.ಡಬ್ಲ್ಯೂ –8 ಪಿ.ಡಬ್ಲ್ಯೂ -6

| | | |
|---|---|---|
| ಹೆಸರು | ಃ | ವಿದ್ಯಾಧರ |
| ತಂದೆಃಗಂಡ | ಃ | ಶಿವಶರಣಪ್ಪ |
| ವಯಸ್ಸು | ಃ | 44 ವರ್ಷ |
| ಉದ್ಯೋಗ | : | ಉಪನ್ಯಾಸಕರು, ಕಲಬುರಗಿ ವಿಶ್ವವಿದ್ಯಾಲಯ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ26.06.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-1, 9 ಪರಿಚಯ ಇರುವುದಿಲ್ಲ. ಸಾಕ್ಷಿಗೆ ಈಗ ಐದು ಜಪ್ತಿ ಪಂಚನಾಮೆಯನ್ನು ತೋರಿಸಿ ಅದರಲ್ಲಿರುವ ಅವರ ಸಹಿಗಳನ್ನು ಗುರುತಿಸಿದ್ದು ಜಪ್ತಿಪಂಚನಾಮೆಗಳನ್ನು ನಿಪಿ-14 ರಿಂದ 18 ಎಂದು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ-14(ಎ) ರಿಂದ ನಿಪಿ-18(ಎ) ಎಂದು ಗುರುತಿಸಲಾಯಿತು. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.04.11.2013 ರಂದು ಬೆಳಗ್ಗೆ 8 ರಿಂದ 9.30 ಗಂಟೆಯವರೆಗೆ ನನ್ನ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಬಂಗಾರವನ್ನು ಕರಗಿಸಿದ ಒಂದು ಗಟ್ಟಿ ಬಂಗಾರ 50 ಗ್ರಾಂ ಮೌಲ್ಯ ರೂ.1,50,000/- ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ, ನನ್ನ ಸಮಕ್ಷಮ ರೂ.1,10,000/- ನಗದು ಹಣ ಜಪ್ತಿಪಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ಬೆಳಗ್ಗೆ 10.30 ರಿಂದ 12.00 ಗಂಟೆಯವರೆಗೆ ನನ್ನ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಒಂದು ನೀಲಿ ಬಣ್ಣದ ಇಜರ ವಾಹನ ಸಂಖ್ಯೆ ಕೆಎ-25/ಎಂ-6412 ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ,

ದಿ.08.11.2013 ರಂದು ಮದ್ಯಾಹ್ನ 3 ರಿಂದ 5.00 ಗಂಟೆಯವರೆಗೆ ನನ್ನ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಬಂಗಾರವನ್ನು ಕರಗಿಸಿದ ಒಂದು ಗಟ್ಟಿ ಬಂಗಾರ 37 ಗ್ರಾಂ ಮೌಲ್ಯ ರೂ.1,11,000/- ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ,

ದಿ.04.11.2013 ರಂದು ಮದ್ಯಾಹ್ನ 1.30 ರಿಂದ 3 ಗಂಟೆಯವರೆಗೆ ನನ್ನ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಬಂಗಾರವನ್ನು ಕರಗಿಸಿದ ಒಂದು ಗಟ್ಟಿ ಬಂಗಾರ 43 ಗ್ರಾಂ ಮೌಲ್ಯ ರೂ.1,20,000/- ಹಾಗೂ ಒಂದು ಬಿಳಿ ಬಣ್ಣದ ಟಾಟಾ ಸುಮೋ ಕೆಎ-01/ಎಂ-9648 ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ,

ದಿ.09.11.2013 ರಂದು ಮದ್ಯಾಹ್ನ 2 ರಿಂದ 4 ಗಂಟೆಯವರೆಗೆ ನನ್ನ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಬಂಗಾರವನ್ನು ಕರಗಿಸಿದ ಒಂದು ಗಟ್ಟಿ ಬಂಗಾರ 33 ಗ್ರಾಂ ಮೌಲ್ಯ ರೂ.99,000/- ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ,

ನಾನು ಐದು ಪಂಚನೆಮಗಳನ್ನು ಓದಿ ತಿಳಿದುಕೊಂಡು ನಾನು ಹಾಗೂ ಚಾಸಾ-9 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.